ಓ.ಎಸ್ ನಂ.*111/2016*

ಪಿ.ಡಬ್ಲು-*1*

ಸಾಕ್ಷಿಯನ್ನು ಇಂದು ದಿನಾಂಕಃ *26.08.2023* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ನಂ.*1, 3* ಮತ್ತು *4* ರ ಪರ ಶ್ರೀ ಬಿ.ಎ.ಡಿ. ವಕೀಲರಿಂದ**

ಸ.ನಂ.94/4 ರ ಮಾಲೀಕ ನಾನು ಇರುತ್ತೇನೆ ಎಂಧರೆ ಸರಿ. ಸದರಿ ಜಮೀನಿನಲ್ಲಿ ಉತ್ತರ ದಕ್ಷಿಣವಾಗಿ ಬಂಡು ಇರುವುದಿಲ್ಲ ಎಂಧರೆ ಸರಿ. ನನ್ನ ಜಮೀನಿನಲ್ಲಿ ಉತ್ತರ-ದಕ್ಷಿಣವಾಗಿ ನನ್ನ

ಜಮನೀನು ಎಲ್ಲಿ ಮುಗಿಯುತ್ತದೆಯೋ ಅಲ್ಲಿ ಒಂದು ಮತ್ತು ಪಶ್ಚಿಮ ದಿಕ್ಕಿನಲ್ಲಿ ಉತ್ತರ ದಕ್ಷಿಣವಾಗಿ ಒಂದು ಬಂಡು ಇರುತ್ತದೆ ಎಂಥರೆ ಸರಿ. ಸ.ನಂ. 94/1, 94/2, 94/3 ರಲ್ಲಿ ಉತ್ತರ ದಕ್ಷಿಣವಾಗಿ ಯಾವುರ್ದೇ ಬಂಡು ಇರುವುದಿಲ್ಲ ಎಂದರೆ ಸರಿ. ಸ.ನಂ. 94/1, 94/2, 94/3 ರಲ್ಲಿ ಪೂರ್ವ ಪಶ್ಚಿಮವಾಗಿ ಒಂದು ಬಂಡು ಇದೆ ಎಂಥರೆ ಸರಿ. ಸ.ನಂ. 95 ಮತ್ತು ಸ.ನಂ. 94/4 ಎರಡೂ ಜಮೀನುಗಳು ನನ್ನ ಜಮೀನುಗಳ ಎಂದರೆ ಸರಿ ಅವೆರಡರ ನಡುವೆ ಪೂರ್ವ ಪಶ್ಚಿಮವಾಗಿ ಒಂದು ಬಂಡು ಇದೆ ಎಂಥರೆ ಸರಿ. ಸದರಿ ಬಂಡಿನ ಅಗಲ ಎಷ್ಟಿದೆ ಎಂಥರೆ ಸಾಕ್ಷಿಯು ಎರಡೂ ಜಮೀನುಗಳು ಕೂಡಿಯೇ ಇರುತ್ತದೆ ಎಂದು ನುಡಿಯುತ್ತಾರೆ, ಮುಂದುವರೆದು ನಮ್ಮದು ಒಂದು ಶೆಡ್ ಇದೆ, ದನಕರುಗಳು ಹೋಗುವಷ್ಟು ಮಾತ್ರ ಬಂಡು ಇದೆ ಎಂದು ನುಡಿಯುತ್ತಾರೆ. ಸದರಿ ನಮ್ಮ ಶೆಡ್ಡಿಗೆ ಹೋಗಲು ಬಂಡಿ ದಾರಿ ಇರುತ್ತದೆ ಎಂಥರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಕಾಲು ದಾರಿ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಶೆಡ್ಡಿನಿಂದ ಪ್ರತಿವಾದಿಯರ ಜಮೀನು 30 ಫೂಟು ಅಂತರದಲ್ಲಿದೆ ಎಂದರೆ ಸರಿ ಅಲ್ಲ ಸಾಕ್ಷಿ ಮುಂದುವರೆದು ಸುಮಾರು 450 ಫೂಟು ಅಂತರವಿದೆ ಎಂಧು ನುಡಿಯುತ್ತಾರೆ. ನಾವು ಶೆಡ್ಡಿಗೆ ಹೋಗಲು ಉಪಯೋಗಿಸುವ ದಾರಿಯನ್ನು ಉಪಯೋಗಿಸಿಕೊಂಡೆ ಪ್ರತಿವಾದಿಯರು ಅವರ ಜಮೀನಿಗೆ ಹೋಗುತ್ತಾರೆ ಎಂಥರೆ ಸರಿ ಅಲ್ಲ.

ಸ.ನಂ.94 ರ ಜಮೀನಿನ ಮಳೆ ನೀರು ಎಂದಿಗೂ ಮಹಾರಾಷ್ಟ್ರ ಮತ್ತು ಕರ್ನಾಟಕ ಬಾರ್ಡರ್ ಮೇಲಿಂದ ಹೋಗಿರುವುದಿಲ್ಲ ಎಂಥರೆ ಸರಿ ಅಲ್ಲ. ಸ.ನಂ.94 ರ ಮಳೆ ನೀರು ಬಾರ್ಡರನ ದಕ್ಷಿಣದ ಮೂಲೆಯಿಂದ ಅದೇ ಸರ್ವೆ ನಂಬರ್ ದಲ್ಲಿ ಹೋಗುತ್ತದೆ, ಬಾರ್ಡರ ಮೇಲೆ ಹೋಗುವುದಿಲ್ಲ ಎಂಥರೆ ಸರಿ ಅಲ್ಲ. ಮಹಾರಾಷ್ಟ್ರದ ಸ.ನಂ 206 ಜಮೀನಿನ ಮಳೆ ನೀರು ಅವರ ಜಮೀನಿನಲ್ಲಿಯೇ ಹೋಗುತ್ತದೆ ಎಂಥರೆ ಸರಿ. ಸ.ನಂ.94 ರ ಮತ್ತು ಮಹಾರಾಷ್ಟ್ರ ರಾಜ್ಯದ ಸ.ನಂ.206 ರ ಮಳೆ ನೀರು ಹೋಗಲು ಯಾವುದೇ ನಿರ್ದಿಷ್ಟವಾದ ಸ್ಥಳವನ್ನು ಗುರುತು ಮಾಡಿರುವುದಿಲ್ಲ ಎಂದರೆ ಸರಿ. ನಾನು ನಕಾಶೆಯಲ್ಲಿ ಎ.ಬಿ. ಎಂದು ತೋರಿಸಿದ ರಸ್ತೆ ಬಾಬು ಲೆಂಡೆರವರಿಗೆ ಇರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ನಕಾಶೆಯಲ್ಲಿ ತೋರಿಸಿದ ಎ.ಬಿ. ರಸ್ತೆಯನ್ನು ದಾವೂದಖಾನ ಮತ್ತು ಮೆಹಬೂಬರವರಿಗೆ ಮಾತ್ರ ನೀಡಿರುತ್ತೇನೆ ಎಂದರೆ ಸರಿ. ಸದರಿ ದಾವೂದಖಾನ ಮತ್ತು ಮೆಹಬೂಬರವರು ನನ್ನ ಸ.ನಂ. 95 ರ ಮೂಲಕ ಹಾಯ್ದು ಅವರ ಜಮೀನಿಗೆ ಹೋಗುತ್ತಿದ್ದರು ಎಂಥರೆ ಸರಿ ಅಲ್ಲ. ನಾನು ಎ.ಬಿ. ರಸ್ತೆಯನ್ನು ಈಗ ಬಂದ್ ಮಾಡಿರುತ್ತೆನೆ ಎಂಥರೆ ಸರಿ, ಸಾಕ್ಷಿ ಮುಂದುವರೆದು ದಾವೂದಖಾನ ಯಾವಾಗ ಜಮಿನು ಮಾರಾಟ ಮಾಡಿರುತ್ತಾನೋ ಅವಾಗಲೆ ಬಂದ್ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.೩ ಮತ್ತು ೪ ರವರು ತಮ್ಮ ಜಮೀನಿಗೆ ಸ.ನಂ. 94/4 ರ ದಕ್ಷಿಣ ಬದುವಿನ ಮೂಲಕ ಅವರ ಜಮೀನಿಗೆ ಹೋಗುತ್ತಾರೆ ಎಂಥರೆ ಸರಿ ಅಲ್ಲ, ಮುಂದುವರೆದು ಮಹಾರಾಷ್ಟ್ರ ಮತ್ತು ಕರ್ನಾಟಕ ಬಾರ್ಡರ ಮೂಲಕ ಹೋಗುತ್ತಾರೆ ಎಂದು ನುಡಿಯುತ್ತಾರೆ. ಸ.ನಂ. 94 ಮೊದಲು 94/1 ಮತ್ತು 94/2 ಎಂದು ಮಾತ್ರ ಇದ್ದವು ಎಂದರೆ ಸರಿ. ಸದರಿ ಸ.ನಂ. 94/2 ಗುಂಜೋಟಿ ರಸ್ತೆಗೆ ಹೊಂದಿಕೊಂಡು 94/1 ಅದರ ಪಶ್ಚಿಮ ದಿಕ್ಕಿಗೆ ಇದ್ದವು ಎಂಥರೆ ಸರಿ. ಸ.ನಂ. 94/1 ರ ಮಾಲೀಕರು ಅವರ ಜಮೀನಿಗೆ ಹೋಗಲು 94/2 ರ ಮೂಲಕವೇ ಹಾಯ್ದು ಹೋಗುತ್ತಿದ್ದರು ಎಂಥರೆ ಸರಿ ಅಲ್ಲ. ಪ್ರತಿವಾದಿ ನಂ.೩ ಮತ್ತು ೪ ರವರಿಗೆ ನಿಮ್ಮ ಜಮೀನು ಸ.ನಂ. 94/4 ರಲ್ಲಿ ಅವರ ಜಮೀನಿಗೆ ಹಾಯ್ದು ಹೋಗಲು ದಾರಿಯ ಸಲುವಾಗಿ 15 ಫೂಟು ಅಗಲ ರಸ್ತೆ ಈಗ ಸದ್ಯ ಮಾರುಕಟ್ಟೆ ಬೆಲೆಗೆ ನೀವು ಮಾರಾಟ ಮಾಡಲು ತಯಾರಿದ್ದೀರಾ ಎಂಥರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು

ಅದಲು ಬದಲು ಮಾಡಲು ತಯಾರಿದ್ದೀರಾ, ಅದಲು ಬದಲು ಮಾಡಿದರೆ ಅವರು ನಿಮಗೆ ರಸ್ತೆ ಕೊಡಲು ತಯಾರಿದ್ದಾರೆ ಎಂಥರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಸ.ನಂ. 94/4 ರಲ್ಲಿ ಯಾರು ಯಾರಿಗೆ ಹಾಯ್ದು ಹೋಗಲು ಹಕ್ಕು ಇದೆ ಎಂದರೆ ಸಾಕ್ಷಿ ಯಾರಿಗೂ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವೂದಖಾನ ಇವರಿಗೆ ರಸ್ತೆಯನ್ನು ಎಷ್ಟು ಹಣ ಪಡೆದುಕೊಂಡು ನೀಡಿದ್ದೀರಾ ಎಂಥರೆ ಸಾಕ್ಷಿಯು ಒಪ್ಪಂದದ ಮೇರೆಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.  ಏನು ಒಪ್ಪಂದ ಮಾಡಿಕೊಂಡು ಅವರಿಗೆ ದಾರಿ ನೀಡಿದ್ದೀರಾ ಎಂದರೆ ಸಾಕ್ಷಿ ಏನು ಒಪ್ಪಂದ ಮಾಡಿಕೊಂಡಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೂದಖಾನನ ಜೊತೆಗೆ ಸದರಿ ಜಮೀನನ್ನು ಮಾರಾಟ ಮಾಡಿದರೆ ನನಗೆ ಮಾರಾಟ ಮಾಡಬೇಕು ಎಂದು ಏನಾದರೂ ಠರಾವು ಮಾಡಿ ದಾರಿ ನೀಡಿದ್ದೀರಾ ಎಂಥರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಎ.ಬಿ. ರಸ್ತೆಯನ್ನು ದಾವೂದಖಾನರವರಿಗೆ ನಾನೇ ನೀಡಿ ನಂತರ ತಡೆಯಾಜ್ಞೆ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂಥರೆ ಸರಿ, ಸಾಕ್ಷಿ ಮುಂದುವರೆದು ನೀವು ಇರುವವರೆಗೆ ಮಾತ್ರ ನೀವು ಉಪಯೋಗಿಸಬೇಕು ಎಂದು ನೀಡಿದ್ದೆನು ಎಂದು ನುಡಿಯುತ್ತಾರೆ. ದಾವೂದಖಾಸ ಮತ್ತು ಮೆಹಬೂಬರವರ ಜಮೀನಿನ ಮೇಲೆ ನಮ್ಮದು ಯಾವುದೇ ಹಕ್ಕು ಇರುವುದಿಲ್ಲ ಎಂಥರೆ ಸರಿ. ಸದರಿ ದಾವೂದಖಾನ ಮತ್ತು ಮೆಹಬೂಬ ಇವರು ಪ್ರತಿವಾದಿ ನಂ.೩ ಮತ್ತು ೪ ರವರಿಗೆ ಮಾರಾಟ ಮಾಡಬಾರದೆಂದು ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ಪಡೆದುಕೊಂಡಿರುತ್ತೇನೆ ಎಂಥರೆ ಸರಿ ಅಲ್ಲ. ಪ್ರತಿವಾದಿ ನಂ.೧ ಮತ್ತು ೨ ರವರು ನಮಗೆ ಜಮೀನನ್ನು ಮಾರಾಟ ಮಾಡದ ಕಾರಣ ನಿರಾಶರಾಗಿ ನಾನು ಈ ಖೊಟ್ಟಿದಾವೆಯನ್ನು ಪ್ರತಿವಾದಿಯರ ವಿರುದ್ದ ಹಾಕಿರುತ್ತೇನೆ ಎಂಥರೆ ಸರಿ ಅಲ್ಲ. ಸ.ನಂ. 94 ಜವಳಗಾ(ಜೆ) ಗ್ರಾಮದ ಸೀಮೆಯಲ್ಲಿ ಬರುತ್ತದೆ ಆದಕಾರಣದಿಂದ ಜವಳಗಾ(ಜೆ) ಯಿಂದಲೇ ಅದಕ್ಕೆ ಹೋಗಲು ಹಾದಿ ಇರುತ್ತದೆ ಎಂಥರೆ ಸಾಕ್ಷಿ ಕರ್ನಾಟಕ ಮತ್ತು ಮಹಾರಾಷ್ಟ್ರ ಸೀಮೆಯ ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ ದಾವಾ ದಾರಿಯನ್ನು ಬಿಟ್ಟು ಅವರ ಜಮೀನಿಗೆ ಹೋಗಲು ಬೇರೆ ದಾರಿಯೇ ಇರುವುದಿಲ್ಲ ಎಂಥರೆ ಸರಿ ಅಲ್ಲ.

**<u>ಪಾಟೀ ಸವಾಲು ಪ್ರತಿವಾದಿ ನಂ. 2 ಮತ್ತು 5 ಪರ ಶ್ರೀಮತಿ ಜೆ.ಎನ್.ಹೆಚ್/ಯು.ಕೆ.ಐ. ವಕೀಲರಿಂದ</u>**

( ಈ ಹಂತದಲ್ಲಿ ಪ್ರತಿವಾದಿ ನಂ 2 ಮತ್ತು 5 ರ ಪರ ವಕಿಲರು ಪಾಟೀ ಸವಾಲಿಲಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.